# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ) ರವರ ಕಛೇರಿ, ಎನ್.ಆರ್.ವೃತ್ತ, ಬೆಂಗಳೂರು –02.**

ಸಂಖ್ಯೆ: ಜಂನಿನಯೋ (ದ)/ಪ್ರಾ.ಪ/ಸನಿ/09 /2021-22 ದಿನಾಂಕ: 29-12-2021.

## ಪ್ರಾರಂಭಿಕ ಪ್ರಮಾಣ ಪತ್ರ

**ವಿಷಯ:** ಖಾತಾ ಸಂಖ್ಯೆ. 229/54/1, 2, 3 & 4, ಗೊಟ್ಟಿಗೆರೆ ಗ್ರಾಮ, ಬೇಗೂರು ಹೋಬಳಿ, ವಾರ್ಡ್ ನಂ. 192, ಬೊಮ್ಮನಹಳ್ಳಿ ವಲಯ, ಬೆಂಗಳೂರು ಇಲ್ಲಿ ನಿರ್ಮಿಸುತ್ತಿರುವ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಬಗ್ಗೆ.

**ಉಲ್ಲೇಖ:** 1) ಅರ್ಜಿದಾರರ ಪ್ರಾರಂಭಿಕ ಪ್ರಮಾಣ ಪತ್ರ ನೀಡಲು ಕೋರಿರುವ ಮನವಿ ದಿನಾಂಕ: 18-11-2021.

2) ನಕ್ಷೆ ಮಂಜೂರಾತಿ ಸಂಖ್ಯೆ: BBMP/ Addl.Dir/JD South/LP/0027/18-19 ದಿ: 26–08–2019.

3) ಅಪರ ನಿರ್ದೇಶಕರು, ನಗರ ಯೋಜನೆ ರವರ ಅನುಮೋದನೆ ದಿನಾಂಕ: 20-12-2021.

*****

ಖಾತಾ ಸಂಖ್ಯೆ. 229/54/1, 2, 3 & 4, ಗೊಟ್ಟಿಗೆರೆ ಗ್ರಾಮ, ಬೇಗೂರು ಹೋಬಳಿ, ವಾರ್ಡ್ ನಂ. 192, ಬೊಮ್ಮನಹಳ್ಳಿ ವಲಯ, ಬೆಂಗಳೂರು ಇಲ್ಲಿನ ಸ್ವತ್ತಿನಲ್ಲಿ ತಳ + ನೆಲ + ಮೇಲಿನ 13 ಅಂತಸ್ತುಗಳ 100 ಘಟಕಗಳುಳ್ಳ ವಸತಿ ಸಮುಚ್ಚಯ ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ. ಸಂಖ್ಯೆ: BBMP/ Addl.Dir/JD South/LP/0027/18-19 ದಿನಾಂಕ: 26–08–2019 ರಂದು ನಕ್ಷೆ ಮಂಜೂರಾತಿ ನೀಡಲಾಗಿರುತ್ತದೆ. ಉಲ್ಲೇಖ (1) ರ ಮನವಿಗೆ ಸಂಬಂಧಿಸಿದಂತೆ, ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 13-12-2021 ರಂದು ಸ್ಥಳ ಪರಿಶೀಲಿಸಲಾಗಿ ಮಂಜೂರಾತಿ ನಕ್ಷೆಯನ್ವಯ ಅಗತ್ಯ ನಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ ಕಂಬಗಳನ್ನು ನಿರ್ಮಿಸಿದ್ದು, ಸದರಿ ಪ್ರಸ್ತಾವನೆಗೆ ಉಲ್ಲೇಖ (3) ರಂತೆ ಅಪರ ನಿರ್ದೇಶಕರು, ನಗರ ಯೋಜನೆ ರವರು ಅನುಮೋದನೆ ನೀಡಿರುತ್ತಾರೆ. ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ. 2,37,000/– ಗಳನ್ನು ಅರ್ಜಿದಾರರಿಂದ ರಸೀದಿ ಸಂಖ್ಯೆ: RE-ifms624-TP/000054 ದಿನಾಂಕ: 29-12-2021 ರಂದು ಸಂದಾಯಿಸಿಕೊಳ್ಳಲಾಗಿದೆ. ಆದುದರಿಂದ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತಿಗೊಳಪಡಿಸಿ ನೀಡಲಾಗಿದೆ.

1) ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2) ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3) ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ತೊಂದರೆಯಾಗದಂತೆ ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
4) ನಕ್ಷೆ ಮಂಜೂರಾತಿ ಪಡೆದ ದಿನಾಂಕದಿಂದ ಐದು ವರ್ಷದೊಳಗಾಗಿ ಕಟ್ಟಡದ ಕಾಮಗಾರಿಯನ್ನು ಪೂರ್ಣಗೊಳಿಸಿ ಸ್ವಾಧೀನಾನುಭವ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು.

29/12/21

ಜಂಟಿ ನಿರ್ದೇಶಕರು, ನಗರ ಯೋಜನೆ (ದಕ್ಷಿಣ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

29/12/21 29.12.21 29/12